**ಸಾಕ್ಷಿಯನ್ನು ದಿಃ *23/07/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಪ್ರತಿವಾದಿ ನಂ.8 ರಿಂದ 10 ಪರ ವಕೀಲರಿಂದ.***

ಪ್ರತಿವಾದಿ ನಂ.7 ಭೀಮಾನಂದ ಮಲ್ಲೇಶಪ್ಪ ದೊಡಮನಿ ಇವರು ಜೀವಂತವಿದ್ದಾರೆ ಇಲ್ಲವೊ ನನಗೆ ಗೊತ್ತಿಲ್ಲ. ಸದರಿಯವರು ದಿಃ26-03-2021 ರಂದು ಪೋತಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

11 ಇ ನಕಾಶೆಗೆ ಸಂಬಂಧಿಸಿ ನಾನು ಧಾರವಾಡದ ಡಿಡಿಎಲ್ಆರ್ ಕಚೇರಿಯಲ್ಲಿ ಅರ್ಜಿ ಕೊಟ್ಟಿದ್ದೆ ಎಂದರೆ ನಿಜ. ಸದರಿ ಅರ್ಜಿಯಲ್ಲಿ ಪ್ರತಿವಾದಿ ನಂ.7 ಇವರು ವಾರಸುದಾರರ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿದಾರರಿಗೆ ಪ್ರತಿವಾದಿ ನಂ.7 ಇವರ ಮರಣ ಪ್ರಮಾಣಪತ್ರ ತೋರಿಸಲಾಗಿ, ಸದರಿ ಪ್ರಮಾಣಪತ್ರ ನೋಡಿ ಪ್ರತಿವಾದಿ ನಂ.7 ನಮಗೆ ಸಂಬಂಧವಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಹೀಗಿರುವಾಗ ಪ್ರತಿವಾದಿ ನಂ.7 ಇವರನ್ನು ಯಾವ ಕಾರಣಕ್ಕೆ ಪಕ್ಷಗಾರರನ್ನಾಗಿ ಮಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಷಯ ಸಂಗತಿ ಬಗ್ಗೆ ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿಲ್ಲ.

ಬ್ಲಾಕ್ ನಂಬರ 32/1 ಅ/18/ಪಿ1 ಕ್ಷೇತ್ರ 50 ಎಕರೆ 04 ಗುಂಟೆ ಜಮೀನನ್ನು ಮೊದಲು ಖರೀದಿ ಕರಾರುಪತ್ರ ಮಾಡಿಕೊಂಡು ನಂತರ ನೊಂದಾಯಿತ ಖರೀದಿ ಪತ್ರ ಮಾಡಿಕೊಂಡಿರುತ್ತೇವೆ. ನಿ.ಪಿ.4 ರಂತೆ ಇರುವ ಖರೀದಿ ಕರಾರುಪತ್ರದಲ್ಲಿ ಶಿವಪ್ಪ ಮತ್ತು ಸಣ್ಣಶಿವಪ್ಪ ಇವರ ವಯಸ್ಸು 13 ಮತ್ತು 14 ವರ್ಷ ಎಂದು ತೋರಿಸಿರುತ್ತೇವೆ ಎಂದರೆ ನಿಜ. ಖರೀದಿ ಕರಾರುಪತ್ರ ಮಾಡಿಕೊಂಡ ಹತ್ತು ತಿಂಗಳ ನಂತರ ನೊಂದಾಯಿತ ಖರೀದಿ ಪತ್ರ ಮಾಡಿಕೊಂಡಿರುತ್ತೇನೆ. ಸದರಿ ನೊಂದಾಯಿತ ಖರೀದಿ ಪತ್ರದಲ್ಲಿ ಶಿವಪ್ಪ ಮತ್ತು ಸಣ್ಣಶಿವಪ್ಪ ಇವರ ವಯಸ್ಸು 22 ಮತ್ತು 19 ಎಂದು ಕಾಣಿಸಿರುತ್ತೇವೆ. ಈ ರೀತಿ ವಯಸ್ಸನ್ನು ಜನ್ಮದಾಖಲೆ ಆಧಾರದ ಮೇಲೆ ಬರೆದುಕೊಂಡಿದ್ದೇವೆ. ಖರೀದಿ ಕರಾರುಪತ್ರ ಮಾಡಿಕೊಳ್ಳುವ ಸಮಯದಲ್ಲಿ ಅವರು ಬಾಯಿಮಾತಿನಿಂದ ಹೇಳಿದ ವಯಸ್ಸು ನಮೂದಿಸಿದ್ದೆವೆ, ಆದರೆ ಪಕ್ಕಾ ಖರೀದಿ ಕರಾರುಪತ್ರ ಮಾಡಿಕೊಳ್ಳು ವ ಸಮಯದಲ್ಲಿ ದಾಖಲೆಯ ಆಧಾರದ ಮೇಲೆ ಅವರ ವಯಸ್ಸು ನಮೂದು ಮಾಡಿದ್ದೇವೆ ಎಂದು ಹೇಳುತ್ತಾರೆ. ಸದರಿ ಜನ್ಮ ದಾಖಲೆಗಳು ನನ್ನ ಹತ್ತಿರ ಇರುತ್ತವೆ, ಅವುಗಳನ್ನು ನಾನು

ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಇಷ್ಟು ದಿನಗಳ ಕಾಲ ಜನ್ಮ ದಾಖಲೆಗಳು ಹಾಜರುಪಡಿಸುವ ಸಂದರ್ಭ ಇರಲಾರದ ಕಾರಣ ಅವುಗಳನ್ನು ಹಾಜರುಪಡಿಸಿಲ್ಲ.

ನಾನು ಖರೀದಿಸಿದ ಆಸ್ತಿಯ ಮಾಲೀಕತ್ವದ ಕುರಿತು ನಾನು ಪರಿಶೀಲಿಸಿ ಖರೀದಿ ಮಾಡಿರುತ್ತೇನೆ. ನಮ್ಮ ಮಾರಾಟಗಾರರಾದ ಲಕ್ಷ್ಮಿ ಮತ್ತು ಅವರ ಇಬ್ಬರೂ ಮಕ್ಕಳಿಗೆ ನಾನು ಖರೀದಿಸಿದ ದಾವಾದಾಸ್ತಿ ಹೇಗೆ ಬಂತು ಎಂದು ತಿಳಿದುಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಲಕ್ಷ್ಮೀ ಇವರ ಅತ್ತೆ ಮತ್ತು ಇನ್ನೊಬ್ಬರು ಪೋತಿಯಾಗಿದ್ದು ಅವರಿಂದ ಲಕ್ಷ್ಮೀಗೆ ಸದರಿ ಆಸ್ತಿ ಬಂದಿತ್ತು ಎಂದು ಉತ್ತರಿಸುತ್ತಾರೆ. ಸದರಿ ಲಕ್ಷ್ಮೀ ಅತ್ತೆಗೆ ನಾನು ಖರೀದಿಸಿರುವ ಆಸ್ತಿ ಅವರ ಮನೆತನದ ಸ್ಥಾವರ ವಾಟ್ನಿಯ ಪ್ರಕಾರ ಬಂದಿರುತ್ತದೆ. ಈ ರೀತಿ ಅವರ ಮನೆತನದಲ್ಲಿ ಯಾವ ದಿನಾಂಕದಂದು ವಾಟ್ನಿಯಾಗಿದೆ ಎನ್ನುವ ಕುರಿತು ದಾಖಲಾತಿಯನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಾನು ಖರೀದಿ ಮಾಡುವ ಸಮಯದಲ್ಲಿ ಉತಾರ, ಡ ಉತಾರ ಮತ್ತು ಇತರೇ ದಾಖಲೆಗಳನ್ನು ಪರಿಶೀಲನೆ ಮಾಡಿ ಖರೀದಿ ಮಾಡಿರುತ್ತೇನೆ. ಈ ರೀತಿ ನಾನು ಪರಿಶೀಲಿಸಿರುವ ಡ ಉತಾರ ಮತ್ತು ಇತರೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ.

ಖರೀದಿ ಪತ್ರದಲ್ಲಿ ಕಾಣಿಸಿರುವ ಚಕ್ಕಬಂದಿಗಳನ್ನು ನಾವು ಗ್ರಾಮ ನಕಾಶೆ ಪ್ರಕಾರ ನಮೂದಿಸಿದ್ದು ಇರುತ್ತದೆ. ಈ ರೀತಿ ಇರುವಾಗ ಸದರಿ ಚಕ್ಕಬಂದಿಗಳು ನಮ್ಮ ಮಾರಾಟಗಾರು ಹೇಳಿರುವುದಿಲ್ಲ ಎಂದರೆ ಸಾಕ್ಷಿದಾರರು ಮಾರಾಟಗಾರರು ಹೇಳಿರುವ ಗ್ರಾಮ ನಕಾಶೆ ಪ್ರಕಾರ ನಮೂದು ಮಾಡಿದ್ದೇನೆ ಎಂದು ಪುನಃ ಹೇಳುತ್ತಾರೆ. ಸದರಿ ಗ್ರಾಮ ನಕಾಶೆ ಸಹ ಈ ದಾವೆಯಲ್ಲಿ ಹಾಜರುಪಡಿಸಿಲ್ಲ, ಮುಂದೆ ಹಾಜರು ಮಾಡುತ್ತೇನೆ.

ನಾನು ಖರೀದಿಸಿರುವ ಜಮೀನನ್ನು ಖರೀದಿ ಮಾಡುವ ಮುಂಚೆ ಅಳತೆ ಮಾಡಿಸಿಲ್ಲ. ನಾನು ಗ್ರಾಮ ನಕಾಶೆ ಪ್ರಕಾರ ನಾನು ಖರೀದಿಸಿರುವ ಆಸ್ತಿ ಚಕ್ಕಬಂದಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ ಖರೀದಿಸಿರುವ ಆಸ್ತಿ ಒಂದೇ ಸಮವಾಗಿ ಇಲ್ಲ ಎಂದರೆ ನಿಜ, ಅದು ಗುಡ್ಡ ಪ್ರದೇಶವಿರುತ್ತದೆ ಎಂದು ಉತ್ತರಿಸುತ್ತಾರೆ. ಖರೀದಿ ಪೂರ್ವದಲ್ಲಿ ನಾನು ಸರ್ವೇ ಕಚೇರಿಗೆ ಹೋಗಿ ಅದರ ಪೂರ್ವಾಪರ

ವಿಚಾರಿಸಿರುತ್ತೇನೆ. ಸದರಿ ಸರ್ವೇ ಕಚೇರಿಯಲ್ಲಿ ನಾವು ಖರೀದಿ ಮಾಡುವ ಕ್ಷೇತ್ರವನ್ನು ಗುರುತಿಸಿ ಅದರಂತೆ ಪೋಡಿ ಮಾಡಿ ಎಂದು ಅರ್ಜಿ ನೀಡಿರುತ್ತೇವೆ. ಖರೀದಿ ಪೂರ್ವದಲ್ಲಿ ಹದ್ದುಬಸ್ತ ಬಾಂದ ಕಲ್ಲು ಹೂಡಲು ಅರ್ಜಿಯಲ್ಲಿ ಕೊಟ್ಟಿಲ್ಲ ಎಂದರೆ ನಿಜ, ಸಾಕ್ಷಿದಾರರು ಮುಂದುವರೆದು ಕ್ಷೇತ್ರಕ್ಕೆ ಮತ್ತು ಬಾಂದ ಕಲ್ಲಿಗೆ ಹೊಂದಾಣಿಕೆ ಆಗುತ್ತಿಲ್ಲ ಎಂದು ಹಿಂಬರಹಣ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಹೊಂದಾಣಿಕೆ ಆಗುತ್ತಿಲ ಎಂಬ ಹಿಂಬರಹವನ್ನು ಯಾವಾಗ ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ನಾನು ಸಲ್ಲಿಸಿರುವ ಅರ್ಜಿ ನೋಡಿ ಹೇಳಬೇಕಾಗುತ್ತದೆ ಎಂದು ಉತ್ತರಿಸುತ್ತಾರೆ. ನಮ್ಮ ಮಾರಾಟಾಗಾರರಾದ ಲಕ್ಷ್ಮಿ ಮತ್ತು ಅವರ ಮಕ್ಕಳಿಗೆ ಈ ರೀತಿ ಅಳತೆ ಸಲುವಾಗಿ ಅರ್ಜಿ ಕೋಡಿ ಎಂದು ಹೇಳಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಹೇಳಿಲ್ಲ ಆದರೆ ಅವರೇ ಅರ್ಜಿ ಕೊಟ್ಟು ಹದ್ದುಬಸ್ತು ಮಾಡಬೇಕೆಂದು ವಿನಂತಿಸಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ನನಗೆ ಖರೀದಿ ವ್ಯವಹಾರಗಳಲ್ಲಿ ಜ್ಞಾನವಿರುತ್ತದೆ ಎಂದರೆ ಸಾಕ್ಷಿದಾರರು ಸದರಿ ಪ್ರಶ್ನೆ ಸಂಬಂಧಪಟ್ಟಿದು ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

ಒಂದು ಚಕ್ಕಬಂದಿಯನ್ನು ಬರೆಸಬೇಕಾದರೆ ಅದರ ನಕಾಶೆ ಇದ್ದರೆ ಮಾತ್ರ ಖಚಿತವಾಗಿ ಬರೆಸಬಹುದು ಎಂದರೆ ಸಾಕ್ಷಿದಾರರು ಆಗಿನ ಕಾಲಕ್ಕೆ ಇರುವ ಗ್ರಾಮ ನಕಾಶೆ ಪ್ರಕಾರ ಬರೆದಿದ್ದು ಇರುತ್ತದೆ, ನಾನು ಖರೀದಿ ಮಾಡಿದ ಸಮಯದಲ್ಲಿ ನಕಾಶೆಯ ಅವಶ್ಯವಿರಲಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಇರುವಾಗ ನಮ್ಮ ಖರೀದಿ ಪತ್ರದಲ್ಲಿ ಅಂದಾಜು ಚಕ್ಕಬಂದಿಗಳನ್ನು ಬರೆಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಸದರಿ ಚಕ್ಕಬಂದಿಗಳು ನಿಜವಿರುತ್ತವೆ ಎನ್ನುವುದಕ್ಕೆ ದಾಖಲೆ ಯಾವುದು ಎಂದರೆ ಸಾಕ್ಷಿದಾರರು ಗ್ರಾಮ ನಕಾಶೆ ಪ್ರಕಾರ ಮತ್ತು ಮಾರಾಟಗಾರರ ಸ್ವಾಧೀನತೆ ಪ್ರಕಾರ ನಾನು ಅವುಗಳನ್ನು ಬರೆಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಮ್ಮ ಮಾರಾಟಗಾರರು ಸ್ವಾಧೀನತೆಯಲ್ಲಿ ಇದ್ದಾರೆ ಎನ್ನುವುದಕ್ಕೆ ಅವರು ಜಮೀನು ಉಳುಮೆ ಮಾಡಿರುವುದನ್ನು ನಾನು ನೋಡಿದ್ದೇನೆ.

***(ನ್ಯಾಯಾಲಯದಲ್ಲಿ ಒಬ್ಬ ವಿಜಯಕುಮಾರು ಚಿಕ್ಕುಂಬಿ ಎನ್ನುವವರು ಹಾಜರು ಇದ್ದು, ವಾದಿ ಪರ ವಕೀಲರು ಅವರ ಹಾಜರಾತಿಗೆ ತಕರಾರು ಮಾಡಿದ್ದು, ಪ್ರತಿವಾದಿ ಪರ ವಕೀಲರು ಅವರ ನುಡಿ ಸಾಕ್ಷ್ಯವನ್ನು ಮಾಡಿಸುವುದಿಲ್ಲ ಎಂದು ಹೇಳಿರುತ್ತಾರೆ)***

ಈ ರೀತಿ ಖರೀದಿ ಪೂರ್ವದಲ್ಲಿ ನಮ್ಮ ಮಾರಾಟಗಾರರು ಉಳುಮೆ ಮಾಡಿರುವುದನ್ನು ನೋಡಿರುತ್ತೇನೆ. ಸದರಿ ಜಮೀನಿನಲ್ಲಿ ಗೊಂಜಾಳ ಮತ್ತು ಭತ್ತವನ್ನು ಬೆಳೆಸಿದ್ದರು.

ಪ್ರತಿವಾದಿ ನಂ.1 ಅಮೀತ ಪ್ರಮೋದ ಕಾಮತ ಇವರು ನನ್ನ ವಿರುದ್ದ ಅಸಲು ದಾವೆ ನಂ.68/2010 ರನ್ನು ಹೂಡಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ ಪ್ರಸ್ತುತ ಪ್ರತಿವಾದಿ ನಂ.1 ಇವರು ಮಾಡಿರುವ ಪಾಟೀ ಸವಾಲಿನಲ್ಲಿ ನಾನು ಸದರಿ ದಾವಾ ಜಮೀನಿನಲ್ಲಿ ಏನೂ ಉಳುಮೆ ಮಾಡಿದ್ದಾರೆ ಎಂದು ನಾನು ನೋಡಿಲ್ಲ ಎಂದು ಹೇಳಿದ್ದಿರಿ ಎಂದು ಸೂಚಿಸಲಾಗಿ, ಸದರಿ ಪಾಟೀ ಸವಾಲಿನ ಪ್ರತಿ ಸಾಕ್ಷಿದಾರರಿಗೆ ತೋರಿಸಿದಾಗ ಸಾಕ್ಷಿದಾರರು ಅದು ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ನೋಡಿಲ್ಲ ಎಂದು ಹೇಳಿದ್ದು, ಪ್ರಸ್ತುತ ಉಳುಮೆ ಮಾಡಿದ್ದನ್ನು ನೋಡಿದ್ದೇನೆ ಎಂದು ಹೇಳಿರುವ ಹೇಳಿಕೆಗಳಲ್ಲಿ ಯಾವುದು ಸರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನನಗೆ ಎರಡು ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಉಳುಮೆಯ ವಿಷಯ ಸಂಗತಿ ನನ್ನ ವಾದ ಪತ್ರದಲ್ಲಿ ಅಥವಾ ಪ್ರಮಾಣಪತ್ರದಲ್ಲಿ ಬರೆದಿದೆಯೋ ಇಲ್ಲವೊ ಎಂದು ನಾನು ನೋಡಬೇಕಾಗುತ್ತದೆ. ನನ್ನ ಮಾರಾಟಗಾರರ ಸ್ವಾದೀನತೆಯನ್ನು ನೊಂದಾಯಿತ ಖರೀದಿ ಪತ್ರದ ಮೂಲಕ ಪಡೆದುಕೊಂಡಿರುತ್ತೇನೆ.

ಖರೀದಿ ನಂತರ ಕಂದಾಯ ನೀರಿಕ್ಷಕರು ಮತ್ತು ತಹಶೀಲದಾರ ಧಾರವಾಡ ಇವರು ಖರೀದಿದಾರರ ನನ್ನ ಮತ್ತು ನನ್ನ ಪತ್ನಿಯ ಹೆಸರನ್ನು ದಾಖಲು ಮಾಡಲು ನಿರಾಕರಿಸಿದರು ಎಂದರೆ ನಿಜ. ನಕಾಶೆ ಇರಲಾರದ ಕಾರಣವೇ ಸದರಿ ಕಂದಾಯ ಇಲಾಖೆಯವರು ನಮ್ಮ ಹೆಸರುಗಳನ್ನು ದಾಖಲು ಮಾಡಲು ನಿರಾಕರಿಸಿದರು ಎಂದರೆ ಸರಿಯಲ್ಲ. ನನ್ನ ಪ್ರಕಾರ ಯಾವ ಕಾರಣಕ್ಕೆ ನಿರಾಕರಿಸಿದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಒಬ್ಬ ಉಳವಪ್ಪ ತಳಗೇರಿ ಇವರು ಸಲ್ಲಿಸಿದ ತಕಾರಾರಿನ ಪ್ರಕಾರ ಉಪವಿಭಾಗಾಧಿಕಾರಿಗಳು (ಎ.ಸಿ) ಇವರ ಆದೇಶದ ಮೇರೆಗೆ ಅದನ್ನು ಎರಡು ವರ್ಷಗಳ ಕಾಲ ತಡೆಹಿಡಿದರು. ಸದರಿ ವಿಷಯದ ಕುರಿತು ಇರುವ ದಾಖಲೆಗಳನ್ನು ಹಾಜರುಪಡಿಸಿಲ್ಲ, ಮುಂದೆ ಹಾಜರುಪಡಿಸುತ್ತೇನೆ.

ಮುಂದುವರೆದು ಖರೀದಿ ಜಮೀನಿನಲ್ಲಿ ಆರು ಎಕರೆ ದಿಃ14-08-2020 ರಂದು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಬಿನಶೇತ್ಕಿ ಮಾಡಿಸಿದ್ದು ಇರುತ್ತದೆ. ಹೀಗೆ ಬಿನಶೇತ್ಕಿ ಮಾಡುವ ಪೂರ್ವದಲ್ಲಿ

ಪ್ರತಿವಾದಿ ನಂ.1 ಇವರು ಡಿಡಿಎಲ್‌ಆರ್ ಇವರ ಮುಂದೆ ಸಬ್‌ಡಿವಿಜನ ಅಫೀಲ 55/2019-20 ಸಲ್ಲಿಸಿದ್ದರು ಎಂದರೆ ನಿಜ. ಸದರಿ ಅಫೀಲನ ವಿಷಯ ಸಂಗತಿ ನನ್ನ ಮಗ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ. ಬಿನಶೇತ್ಕಿ ಮಾಡುವ ಸಮಯದಲ್ಲಿ ಸದರಿ ಆಸ್ತಿಗೆ ಸಂಬಂಧಪಟ್ಟಿರುವಂತೆ ಯಾವುದೇ ರೀತಿಯ ವ್ಯಾಜ್ಯಗಳು ಯಾವುದೇ ರೀತಿಯ ನ್ಯಾಯಾಲಯದಲ್ಲಿ ಚಾಲ್ತಿ ಯಲ್ಲಿರುವುದಿಲ್ಲ ಎಂದು ಶಪಥ ಪತ್ರ ಸಲ್ಲಿಸಬೇಕು ಎಂದರೆ ನಿಜ. ಈ ರೀತಿ ಇರುವಾಗ ಸದರಿ ಅಫೀಲ 55/2019-20 ಚಾಲ್ತಿಯಲ್ಲಿದ್ದರು ಸಹ ಶಪಥ ಪತ್ರದಲ್ಲಿ ನನ್ನ ಮಗ ಸದರಿ ವಿಷಯವನ್ನು ಬರಿಯದೇ ಸುಳ್ಳು ಶಪಥಪತ್ರ ಸಲ್ಲಿಸಿರುತ್ತಾರೆ ಎಂದರೆ ನಿಜ.

ಮಡಿವಾಳಪ್ಪ ಹೆಗ್ಗೇರಿ ಎನ್ನುವವರು ಉಳವಪ್ಪ ಚನ್ನಬಸಪ್ಪ ತಳಿಗೇರಿ ಇವರ ವಿರುದ್ಧ ಎರಡು ಅಸಲು ದಾವೆ ನಂ.39/2000 ಮತ್ತು 43/2000 ರನ್ನು ಹೂಡಿರುವ ಕುರಿತು ನನಗೆ ಗೊತ್ತಿಲ್ಲ. ಸದರಿ ಎರಡು ಅಸಲು ದಾವೆಗಳ ಕುರಿತು ಪ್ರಸ್ತುತ ಪ್ರತಿವಾದಿ ನಂ.1 ಸಲ್ಲಿಸಿರುವ ಅಸಲು ದಾವೆ ನಂ.68/2010 ರಲ್ಲಿ ಬರೆದಿರುವ ವಿಷಯ ಸಂಗತಿ ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿದ್ದೇನೆ ಇಲ್ಲವೂ ನನಗೆ ನೆನಪಿಲ್ಲ. ಸದರಿ ದಾವೆ ನಂ.68/2010 ರಲ್ಲಿ ನಾನು ನನ್ನ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ನಿಜ. ಮಡಿವಾಳಪ್ಪ ಹೆಗ್ಗೇರಿ ಇವರು ಸಲ್ಲಿಸಿದ ಎರಡು ದಾವೆಗಳು, ಜನತಾ ನ್ಯಾಯಾಲಯದಲ್ಲಿ ನಿಖಾಲಿಯಾಗಿರುವ ವಿಷಯ ಸಂಗತಿ ನನಗೆ ಗೊತ್ತಿಲ್ಲ.

ಪಿಹೆಚ್‌ಡಿಎಲ್‌ಎಸ್ 570/2006-07 ರನ್ನು ಪ್ರಶ್ನಿಸಿ ನಾನು ಮಾಡಿರುವ ಮೇಲ್ಮನವಿ ಸಂಖ್ಯೆ 22/2010-11 ರಲ್ಲಿ ಪ್ರಸ್ತುತ ಪ್ರತಿವಾದಿ ನಂ.1 ಇವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.